# ಕನ್ನಡ ಪ್ರಮುಖ ನಾಟಕಕಾರರು ಮತ್ತು ಅವರ ಕೊಡುಗೆ

**ನಿರ್ಮಲಾ ಶೀಲವಂತರ***

**DOI: https://doi.org/10.5281/zenodo.22106671**

**ABSTRACT**

ಕನ್ನಡ ಸಾರಸ್ವತ ಲೋಕದಲ್ಲಿ ನಾಟಕ ಕಲೆಯು ಸಮಾಜದ ವಾಸ್ತವಿಕ ಬದುಕನ್ನು ಪ್ರತಿಬಿಂಬಿಸುವ ಜೀವಂತ ಮಾಧ್ಯಮವಾಗಿದೆ. ವಿಜಯನಗರ ಸಾಮ್ರಾಜ್ಯ, ಕೆಳದಿ ಹಾಗೂ ಮೈಸೂರು ಅರಸರ ಪೋಷಣೆಯಿಂದ ಬೆಳೆದುಬಂದ ಕನ್ನಡ ರಂಗಭೂಮಿಗೆ ತನ್ನದೇ ಆದ ಭವ್ಯ ಇತಿಹಾಸವಿದೆ. ಹತ್ತೊಂಬತ್ತನೇ ಶತಮಾನದ ಅಂತ್ಯದ ವೇಳೆಗೆ ವೃತ್ತಿಪರ ನಾಟಕ ಮಂಡಳಿಗಳು ಸ್ಥಾಪನೆಗೊಂಡು ರಂಗಭೂಮಿಗೆ ಹೊಸ ಆಯಾಮ ಒದಗಿಸಿದವು. ಈ ವಿಕಾಸದ ಹಾದಿಯಲ್ಲಿ ನಾಟ್ಯಾಚಾರ್ಯ ಗರುಡ ಸದಾಶಿವರಾಯರ ಸಾಧನೆ ಅತಿಮುಖ್ಯವಾದದ್ದು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ಅನೇಕ ಕಷ್ಟಗಳನ್ನು ಎದುರಿಸಿದರೂ, ಬಹುಭಾಷಾ ಪಾಂಡಿತ್ಯ ಹಾಗೂ ರಾಷ್ಟ್ರೀಯತೆಯ ಪ್ರೇರಣೆಯಿಂದ ಅವರು ಶ್ರೇಷ್ಠ ರಂಗಕರ್ಮಿಯಾಗಿ ರೂಪುಗೊಂಡರು. ಸ್ವಂತ ನಾಟಕ ಕಂಪನಿಯನ್ನು ಕಟ್ಟಿ, ಐವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿ, ನಿರ್ದೇಶಿಸಿ, ಮುಖ್ಯಭೂಮಿಕೆಯಲ್ಲಿ ಅಭಿನಯಿಸುವ ಮೂಲಕ ಕನ್ನಡ ವೃತ್ತಿ ರಂಗಭೂಮಿಯನ್ನು ಅತ್ಯಂತ ಶ್ರೀಮಂತಗೊಳಿಸಿದರು. ಕೇವಲ ಮನರಂಜನೆಯಾಗಿರದೆ, ಜನಶಿಕ್ಷಣ ಹಾಗೂ ಸಾಮಾಜಿಕ ಜಾಗೃತಿಯ ಸಾಧನವಾಗಿ ನಾಟಕವನ್ನು ಬೆಳೆಸಿದ ಗರುಡರ ಬದುಕು ಮತ್ತು ಕಲೆಯ ಸಮಗ್ರ ನೋಟವನ್ನು ಇಲ್ಲಿ ಕಟ್ಟಿಕೊಡಲಾಗಿದೆ.

**KEYWORDS:** ಕನ್ನಡ ರಂಗಭೂಮಿ, ಗರುಡ ಸದಾಶಿವರಾಯ, ವೃತ್ತಿ ನಾಟಕ ಮಂಡಳಿ, ನಾಟಕ ಸಾಹಿತ್ಯ, ರಂಗಭೂಮಿ ಇತಿಹಾಸ.

* **ನಿರ್ಮಲಾ ಶೀಲವಂತರ,** ಸಂಶೋಧನಾ ವಿದ್ಯಾರ್ಥಿನಿ, ಜೆ.ಸಿ.ಬಿ.ಎಮ್. ಸಂಶೋಧನಾ ಕೇಂದ್ರ, ಶೃಂಗೇರಿ.

“ಭಾಷೆ ಎಂಬ ಜ್ಯೋತಿ ಬೆಳಗದಿದ್ದರೆ ಜಗತ್ತು ಅಜ್ಞಾನವೆಂಬ ಕತ್ತಲೆಯಿಂದ ಕೂಡಿರುತ್ತಿತ್ತು”. ದಂಡಿಯ ಹೇಳಿಕೆಯಂತೆ, ಭಾಷೆಯಿಂದ ಹೆಮ್ಮರವಾಗಿ ಬೆಳೆದಂತಹ ಸಾಹಿತ್ಯವು ಸಮಾಜದ ಕನ್ನಡಿ ಇದ್ದಂತೆ. ಕನ್ನಡ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸಮಾಜದ ವಿದ್ಯಮಾನಗಳನ್ನು, ಆಗುಹೋಗುಗಳ ಚಿತ್ರಣಗಳನ್ನು, ವಾಸ್ತವ ಬದುಕಿನ ದೃಷ್ಟಾಂತಗಳನ್ನು ಸ್ಪಷ್ಟವಾಗಿ ಗೋಚರಿಸುತ್ತದೆ. ನಾಟಕ ಸಾಹಿತ್ಯವು ಸಮಾಜದ ವಾಸ್ತವ ಬದುಕಿನ ಅನುಭವಗಳನ್ನು ಜೀವಂತವಾಗಿ ಪ್ರತಿಬಿಂಬಿಸುವ ಶಕ್ತಿಯುತವಾದ ವೈಶಿಷ್ಟ್ಯತೆಯನ್ನು ಗೋಚರಿಸುವ ಮಾಧ್ಯಮವಾಗಿದೆ.

ಕನ್ನಡ ಸಾರಸ್ವತ ಲೋಕದಲ್ಲಿ ಕನ್ನಡ ಸಾಹಿತ್ಯವನ್ನು ಹಲವಾರು ಸಾಹಿತ್ಯದ ಪ್ರಕಾರಗಳಾಗಿ ಕವಲೊಡೆದು ಸಾಹಿತ್ಯದೇವಿಯು ನಂದಾದೀವಿಗೆಯಂತೆ ಕಂಗೊಳಿಸುತ್ತಿದ್ದಾಳೆ. ಈ ಸಾಹಿತ್ಯದ ಪ್ರಕಾರಗಳಲ್ಲಿ ನಾಟಕ ಸಾಹಿತ್ಯವೂ ಒಂದು ಅವಿಭಾಜ್ಯ ಅಂಗವಾಗಿ ಅಥವಾ ಪ್ರಮುಖವಾದ ಸಾಹಿತ್ಯದ ಪ್ರಕಾರವನ್ನು ಅಲಂಕರಿಸುತ್ತದೆ. ನಾಟಕ ಸಾಹಿತ್ಯವೆಂಬುದು ಕಲಾತ್ಮಕವಾಗಿ, ಅಭಿನಯ ಅಸ್ಮಿತೆಯ ರಸದೌತಣವನ್ನು ಬಡಿಸುವ ರಸಪಾತ್ರೆಯನ್ನು ನಾಟಕ ಸಾಹಿತ್ಯವೆಂದು ಸಾಮಾನ್ಯವಾಗಿ ಕರೆಯುವುದುಂಟು. ಸಾಮಾನ್ಯವಾಗಿ ಕನ್ನಡ ರಂಗಭೂಮಿಯ ಪ್ರಾಚೀನತೆಯನ್ನು ಅವಲೋಕಿಸಿದಾಗ ಅತಿಯಾದ ಪ್ರಾಚೀನತೆ ಮತ್ತು ಚರಿತ್ರೆಯನ್ನು ಒಳಗೊಂಡಿದೆ ಎಂದರೆ ತಪ್ಪಾಗಲಾರದು. ರಂಗಭೂಮಿಯೆನ್ನುವುದು ಸಮಗ್ರ ಮಂಟಪ. ಈ ರಂಗಮಂಟಪದಲ್ಲಿ ಬೇಸರಗೊಂಡ ಮನಸ್ಸಿಗೆ ತಲಸ್ಪರ್ಶಿಸಿ ಸಿಂಚನವನ್ನೆರೆದು ಜೀವಕ್ಕೆ ಸವಿ ಉಣಬಡಿಸುವ ಅದ್ಭುತವಾದ ಶಕ್ತಿಯನ್ನು ಒಳಗೊಂಡಿದೆ. ಜನಪದ ಮತ್ತು ಜಾನಪದ ಹಾಗೂ ಜನ–ಜೀವನದ ಮೂಲಸೆಲೆ. ಇಂಗ್ಲೀಷ್ ಪ್ರಸಿದ್ಧ ಸಾಹಿತಿಯಾದ ಸರ್. ವಿಲಿಯಂ ಶೇಕ್ಸ್‌ಪಿಯರ್ ಹೇಳಿದ ಹಾಗೆ The whole world is a stage men and women are actors and actress they play their part accordingly ಜಗವೇ ಒಂದು ನಾಟಕರಂಗ. ವಿಧಿಯೇ ಅದರ ಸಾಹೇಬ. ಜನರೆಲ್ಲರೂ ಅದರ ಪಾತ್ರಧಾರಿಗಳು. ಇಲ್ಲಿ ಎಲ್ಲರೂ ತಮ್ಮ ಪಾತ್ರಗಳನ್ನು ನಿಭಾಯಿಸಿಕೊಂಡು ಹೋಗಬೇಕು. ಅಂದರೆ ಜೀವನ ಒಂದು ರಂಗಭೂಮಿ ಇದ್ದಹಾಗೆ. ಆದ್ದರಿಂದ ಇಲ್ಲಿ ಶೇಕ್ಸ್‌ಪಿಯರ್‌ನ ಸಾಲುಗಳು ನೆನಪಾಗುವುದೇ ಈ ಲೇಖನದ ಕೇಂದ್ರಬಿಂದು. ಶ್ರೇಷ್ಠ ಅಗ್ರಗಣ್ಯ ನಾಟ್ಯಾಚಾರ್ಯರಾದ ಗರುಡ ಸದಾಶಿವರಾಯರು ಇವರ ವ್ಯಕ್ತಿತ್ವಕ್ಕಿಂತ ಮತ್ತು ಪರಿಚಯಕ್ಕಿಂತಲೂ ರಂಗಭೂಮಿಯ ಪರಿಚಯ, ಇತಿಹಾಸ ಮತ್ತು ಬೆಳವಣಿಗೆ ಕುರಿತು ತಿಳಿದುಕೊಳ್ಳಬೇಕು.

**ರಂಗಭೂಮಿ:**

ಕನ್ನಡ ರಂಗಭೂಮಿಯನ್ನು ಅವಲೋಕಿಸಿದಾಗ ಇದರ ಪ್ರಾಚೀನತೆಯನ್ನು ಇದರ ವೈಭವವು ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಿಂದ ನೋಡುತ್ತಾ ಬರುತ್ತದೆ. ಕ್ರಿ. ಶ. 1582ರಿಂದ ಕ್ರಿ. ಶ. 1620ರ ವರೆಗೆ ರಾಜನಾಗಿದ್ದ ಇಕ್ಕೇರಿ ಕೆಳದಿ ಸಂಸ್ಥಾನದ ವೆಂಕಟಪ್ಪನಾಯಕನ ಆಡಳಿತಾವಧಿಯಲ್ಲಿ ನಾಟಕ ಶಾಲೆಯಿತ್ತು ಎನ್ನುವುದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ. ಮೈಸೂರು ರಾಜ್ಯವನ್ನು ಕ್ರಿ. ಶ. 1638ರಿಂದ ಕ್ರಿ. ಶ. 1659ರ ವರೆಗೆ ಆಡಳಿತ ನಡೆಸಿದ ರಾಜ ಕಂಠೀರವ ನರಸ ರಾಜ ಅವರ ಅರಮನೆಯಲ್ಲಿಯೂ ಸಹ ನಾಟಕ ಶಾಲೆ ಇತ್ತು ಎಂದು ತಿಳಿದು ಬರುತ್ತದೆ.

17ನೇ ಶತಮಾನದ ಅಂತ್ಯಭಾಗದಲ್ಲಿ ರಚನೆಯಾದಂತಹ ಸಂಸ್ಕೃತದ ಶ್ರೀ ಹರ್ಷನ ರತ್ನಾವಳಿ ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಿದ ಮಿತ್ರವಿಂದಾ ಗೋವಿಂದ ಎನ್ನುವವರು

ಕನ್ನಡದಲ್ಲಿ ದೊರೆತ ಮೊಟ್ಟ ಮೊದಲನೇ ನಾಟಕ. ಇದನ್ನು ಚಿಕ್ಕದೇವರಾಜ ಕ್ರಿ. ಶ. 1672 ರಿಂದ ಕ್ರಿ. ಶ. 1704ರ ಆಸ್ಥಾನ ಕವಿ ಸಿಂಗಾರ್ಯರು ರಚನೆ ಮಾಡಿದರು. ನಾಟಕ ಸಾಹಿತ್ಯದ ಇತಿಹಾಸದಲ್ಲಿ ಪದೇ ಪದೇ ಪ್ರಸ್ತಾಪವಾಗಿದ್ದರಿಂದ ಇದನ್ನು ಮೊದಲನೆಯ ಕನ್ನಡ ನಾಟಕವೆನ್ನುತ್ತಾರೆ. ಕ್ರಿ. ಶ. 1764ರಲ್ಲಿ ಧಾರವಾಡದ ಶುಕ್ರವಾರ ಪೇಟೆಯಲ್ಲಿ 'ದಶಾವತಾರ ನಾಟಕ' ನಡೆಸಲು ರಾಮಭಟ್ ಜೋಯಿಸ್ ಅವರಿಗೆ ಮರಾಠಾ ಪೇಶ್ವೆಯವರು ವಾರ್ಷಿಕ ಅನುದಾನ ನೀಡುತ್ತಿದ್ದರೆಂದು ಕರ್ನಾಟಕ ಸರ್ಕಾರದ ಕರುನಾಡು ಪತ್ರಿಕೆಯಿಂದ ತಿಳಿದು ಬರುತ್ತದೆ.

ಕರ್ನಾಟಕದ ರಂಗಭೂಮಿಗೆ ಒಂದು ಸ್ಪಷ್ಟ ಚಿತ್ರಣ ಬಂದಿದ್ದು ಸುಮಾರು. ಕ್ರಿ. ಶ. 1860 ರಿಂದ ಕ್ರಿ. ಶ. 1885ರ ವರ್ಷಗಳಲ್ಲಿ ಎನ್ನುವುದು ನಾಟಕ ಇತಿಹಾಸಕಾರರ ಅಭಿಪ್ರಾಯ. ಕ್ರಿ. ಶ. 1869ರಲ್ಲಿ ಬೆಳಗಾವಿ ಜಿಲ್ಲೆಯ "ಹಲಸಿ ನಾಟಕ ಕಂಪನಿ", ಕ್ರಿ. ಶ. 1872ರಲ್ಲಿ ಧಾರವಾಡದಲ್ಲಿ "ಶರತಪುರ ನಾಟಕ ಮಂಡಳಿ", ಕ್ರಿ. ಶ. 1877 ರಲ್ಲಿ ಶ್ರೀ ಸಕ್ಕರಿ ಭಾಳಾಚಾರ್ಯರು (ಶಾಂತಕವಿ) ಗದಗಿನ ಕೆಲವು ಮಿತ್ರರೊಂದಿಗೆ ಸೇರಿಕೊಂಡು, ಶ್ರೀ. ವೀರನಾರಾಯಣ ಪ್ರಸಾದಿತ "ಕೃತಪುರ ನಾಟಕ ಮಂಡಳಿ"ಯನ್ನು ಸ್ಥಾಪನೆ ಮಾಡಿದರು. ಕ್ರಿ. ಶ. 1882ರಲ್ಲಿ 'ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್' ಅವರು ಮೈಸೂರು ಅರಮನೆಯಲ್ಲಿ "ಚಾಮರಾಜೇಂದ್ರ ನಾಟಕ ಸಭಾ" ಆರಂಭಿಸಿದರು. ಈ ಮಹನೀಯರೆಲ್ಲರೂ ಆಧುನಿಕ ಕನ್ನಡ ರಂಗಭೂಮಿಗೆ ಚಾಲನೆ ದೊರಕಿಸಿಕೊಟ್ಟರು ಎನ್ನುವುದನ್ನು ನಾಟಕದ ಇತಿಹಾಸಕಾರರು ದಾಖಲಿಸುತ್ತಾರೆ.

ಮನುಷ್ಯನ ಶಿಕ್ಷಣ ಮತ್ತು ಆಧ್ಯಾತ್ಮ ಚಿಂತನೆಗಾಗಿ ಮನರಂಜನೆಯ ಜೊತೆ–ಜೊತೆಗೆ ಜನರಂಜನೆ, ಜನಶಿಕ್ಷಣ ಮತ್ತು ಜನಕಲ್ಯಾಣಕ್ಕಾಗಿ ಈ ನಾಟಕ ಕಲೆ ಹುಟ್ಟಿಕೊಂಡಿತು. ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಮಾತು, ಅಭಿನಯ ಎಲ್ಲವೂ ಒಳಗೊಂಡಿವೆ. ನಿರ್ದೇಶಕ, ನೇಪಥ್ಯ ಕಲಾವಿದರು, ಪರದೆ ಬರೆಯುವವರು, ವೇಷಭೂಷಣಗಳನ್ನು ಸಿದ್ಧಪಡಿಸುವವರು, ರಂಗಸಜ್ಜಿಕೆಯನ್ನು ತಯಾರು ಮಾಡುವವರು ಮುಂತಾದವರೆಲ್ಲರೂ ಸೇರಿ ಒಂದೇ ಸಮೂಹ ಕಲೆಯನ್ನು ಪ್ರದರ್ಶನ ಮಾಡುತ್ತಾರೆ. ಈ ಕಲೆಗೊಂದು ಸಂಸ್ಕೃತಿ ಮತ್ತು ಪರಂಪರೆ ಇದೆ. ರಂಗಭೂಮಿಯನ್ನು ಈ ವಿವಿಧ ಪ್ರಕಾರಗಳಲ್ಲಿ ವಿಂಗಡನೆ ಮಾಡಲಾಗಿದೆ. 1) ಜನಪದ ರಂಗಭೂಮಿ, 2) ವೃತ್ತಿ ರಂಗಭೂಮಿ, 3) ಹವ್ಯಾಸಿ ರಂಗಭೂಮಿ, 4) ಜನ ರಂಗಭೂಮಿ (ಬೀದಿ ನಾಟಕಗಳು)

ಕನ್ನಡ ರಂಗಭೂಮಿಯ ಚರಿತ್ರೆಯು ಅತೀ ಪ್ರಾಚೀನವಾದದ್ದೆಂಬುದರಲ್ಲಿ ಎರಡು ಮಾತಿಲ್ಲ. ಕನ್ನಡ ರಂಗಭೂಮಿಯ ಮತ್ತೆ ವಿವಿಧ ರೀತಿಯಾಗಿ ಸಂಸ್ಕೃತಿ, ಜನಗಳ ಆಚರಣೆ, ಪರಿಸರ ಮತ್ತು ವಾತಾವರಣಗಳಿಗೆ ಅನುಗುಣವಾಗಿ ಗೊಂಬೆಯಾಟ, ತೊಗಲು ಗೊಂಬೆಯಾಟ, ಬಯಲಾಟ, ದಶಾವತಾರ ಎಂದು ಕರೆಯುವ ಯಕ್ಷಗಾನ ಆಟಗಳು ಅದರಲ್ಲಿ ತೆಂಕು ಬಡಗು ಎಂಬ ಪ್ರಭೇದಗಳು ಕಂಡು ಬರುತ್ತವೆ. ದೊಡ್ಡಾಟದಲ್ಲಿ 'ಮೂಡಲಪಾಯ' ಎನ್ನುವುದು ಅಧ್ಯಯನಕ್ಕೆ ಇರುವ ಹೆಸರು. ಘಟ್ಟದ ಕೋರೆ, ಶನಿ ಕಥೆ ಆಟ, ಕೃಷ್ಣ ಪಾರಿಜಾತ ಎನ್ನುವ ದೊಡ್ಡಾಟದ ಪ್ರಕಾರಗಳು ಮತ್ತು ನಾಟಕಗಳು ಪ್ರಮುಖವಾಗಿವೆ. ಇಂತಹ ರಂಗಭೂಮಿಗೆ ತನ್ನದೇಯಾದ ಶೈಲಿಯಲ್ಲಿ ಇತಿಹಾಸ ಸೃಷ್ಟಿಸಿದ ಅಭಿನವ ಕೇಸರಿ ಎಂದೇ ಪ್ರಖ್ಯಾತಿ ಪಡೆದ ಅಭಿನಯ ಕೇಸರಿಯವರಾದ ಗರುಡ ಸದಾಶಿವರಾಯರು ಒಂದು ಮೈಲುಗಲ್ಲಿನಂತೆ ನಿಂತಿದ್ದಾರೆ. 50ಕ್ಕಿಂತ ಹೆಚ್ಚು ನಾಟಕಗಳನ್ನು ರಚಿಸಿ, ರಂಗಭೂಮಿ ಅಗಾಧವಾದ ಕೊಡುಗೆ ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸ್ವತಃ

ತಾವೇ ರಚಿಸಿದ್ದರಲ್ಲಿ ಮುಖ್ಯವಾದ ಪಾತ್ರವನ್ನು ತೆಗೆದುಕೊಂಡು ಅಭಿನಯಿಸುತ್ತಿದ್ದರು. ರಂಗ ಗರಡಿ ಸ್ತಂಭ ಅವರಾಗಿದ್ದರು.

**ಗರುಡ ಸದಾಶಿವರಾಯರು:**

ಗರುಡ ಸದಾಶಿವರಾಯರು 18–08–1882ರಲ್ಲಿ ಕೊಪ್ಪಳ ಜಿಲ್ಲೆಯ ಅಳವುಂಡಿ ಎಂಬ ಗ್ರಾಮದಲ್ಲಿ 'ಸ್ಮಾರ್ತ' ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ – ಗುರುನಾಥ ಭಟ್ಟ, ತಾಯಿ – ಸುಭದ್ರಾಬಾಯಿ. ಇವರಿಗೆ ಸದಾಶಿವರಾಯ, ಸಂಭಾಜಿರಾಯ ಮತ್ತು ರಾಧಾಬಾಯಿ ಎಂಬ ಮೂರು ಜನ ಮಕ್ಕಳಲ್ಲಿ ಹಿರಿಯರಾಗಿ ಜನಿಸಿದರು. ಸದಾಶಿವರಾಯರಿಗೆ ಸುಮಾರು ನಾಲ್ಕು ವರ್ಷದವರಿದ್ದಾಗಲೇ ತಾಯಿ ತೀರಿಕೊಂಡಿದ್ದರು. ಆದ್ದರಿಂದ ತಮ್ಮ ತಂಗಿಯ ಸಮೇತರಾಗಿ ಅಳವುಂಡಿ ಗ್ರಾಮವನ್ನು ಬಿಟ್ಟು ಪಕ್ಕದ ಗಿಣಿಗೇರಿ ಎಂಬ ಗ್ರಾಮದಲ್ಲಿ ಚಿಕ್ಕಮ್ಮ ರುಕ್ಮಿಣಿಬಾಯಿಯವರ ಆಶ್ರಯದಲ್ಲಿ ಬೆಳೆದರು. ರುಕ್ಮಿಣಿ ಬಾಯಿಯವರು ತಬ್ಬಲಿಯಾದ ಮಕ್ಕಳನ್ನು ಪ್ರೀತಿ, ಅಕ್ಕರೆ ಹಾಗೂ ಮಮತೆಯಿಂದ ಪೋಷಿಸಿದರು. "ಗರುಡ" ಎಂಬ ಇವರ ಮನೆತನದ ಅಡ್ಡ ಹೆಸರು ರೂಢಿಯಲ್ಲಿರುವ ಕೆಲ ಅಡ್ಡ ಹೆಸರುಗಳಲ್ಲೇ ವಿಶಿಷ್ಟವಾಗಿದೆ. ಇಂತಹ ಅಡ್ಡ ಹೆಸರಿರುವ ಮನೆತನಗಳು ತುಂಬಾ ವಿರಳ. "ಈ ಮನೆತನದವರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದಿರುವುದಾಗಿ ತಿಳಿದು ಬರುತ್ತದೆ. 'ಪೇಶ್ವೆ' ಆಡಳಿತಾವಧಿಯಲ್ಲೇ ಈ ಮನೆತನದವರು ಮಹಾರಾಷ್ಟ್ರ, ಪುಣೆ ತೊರೆದು ನಿಜಾಮನ ಆಡಳಿತದ ಪ್ರದೇಶವಾದ ಈಗಿನ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿಜಾಮನ ಆಶ್ರಯ ಪಡೆದರು ಎಂದು ತಿಳಿದು ಬರುತ್ತದೆ".[1]

ಬಹುಶಃ ವೈದಿಕ ಹಾಗೂ ವೈದ್ಯ ಎರಡೂ ವೃತ್ತಿಯಲ್ಲಿ ಈ ಮನೆತನದವರು ತಮ್ಮನ್ನು ತೊಡಗಿಸಿಕೊಂಡಿದ್ದರು. ಬಹಳ ದಿನದವರೆಗೆ ಈ ಮನೆತನದ ಅಡ್ಡ ಹೆಸರು ವೈದ್ಯ ಎಂತಲೂ ಇತ್ತು. "'ಗರುಡ' ಮನೆತನದ ಮೂಲವು 12ನೇ ಶತಮಾನದ ತುದಿಯಲ್ಲಿ ಪೃಥ್ವಿರಾಜ ಚವ್ಹಾಣನವರೆಗೂ ಚಾಚಿಕೊಳ್ಳುತ್ತದೆ. ಲಭ್ಯ ಮಾಹಿತಿಯ ಪ್ರಕಾರ, ಗರುಡ ಎಂಬ ಅಂಗರಕ್ಷಕ ಲಕ್ಷಣ ಭಟ್ಟನೆಂಬಾತ ಪೃಥ್ವಿರಾಜ ಚವ್ಹಾಣನ ಮರಣೋತ್ತರ ಕಾಲದಲ್ಲಿ ಆತನ ಜೊತೆಗಿದ್ದುದಾಗಿ ತಿಳಿದು ಬರುತ್ತದೆ. ಮುಂದೆ ಇವರ ಮನೆತನದವರು ಪೇಶ್ವೆಯವರ ಆಶ್ರಯ ಪಡೆದವರೆಂದು ತಿಳಿದು ಬರುತ್ತದೆ. ಹೀಗಾಗಿ 'ಗರುಡ', 'ವೈದ್ಯ' ಈ ಎರಡೂ ಅಡ್ಡ ಹೆಸರುಗಳು ಕಾಲ ಕ್ರಮೇಣ ಬಳಕೆಯಾಗುತ್ತಾ ಬಂದು, ಕೊನೆಗೆ 'ಗರುಡ' ಎಂಬ ಅಡ್ಡ ಹೆಸರು ಖಾಯಂ ಆಗಿ ಬಳಕೆಯಾಗುತ್ತಾ ಬಂತು".[2] ಇದು ಬಳಕೆಗೆ ಬಂದದ್ದು ಸದಾಶಿವರಾಯರು ಪೂರ್ಣ ಪ್ರಮಾಣದ ರಂಗ ಕರ್ಮಿಯಾಗಿ ತಮ್ಮನ್ನು ತೊಡಗಿಸಿಕೊಂಡ ನಂತರ. ಅಂದರೆ "ಸುಮಾರು ಕ್ರಿ. ಶ. 1919ರ ನಂತರ. ಕೊಪ್ಪಳ ಜಿಲ್ಲೆಯ ಕೌಲೂರಿನಲ್ಲಿ ನೆಲೆ ನಿಂತ ನಿಜಾಮನಿಂದ ಉಂಬಳಿ ಪಡೆದ ತುಕ್ಕಣ್ಣ ಭಟ್ಟ ಎಂಬ ವೈದಿಕನೇ ಈ ಮನೆತನದ ಮೂಲ ಪುರುಷನೆಂದು ತಿಳಿದು ಬರುತ್ತದೆ".[3]

ಗರುಡ ಸದಾಶಿವರಾಯರ ತಾಯಿ ತೀರಿಕೊಂಡ ಮೇಲೆ ಸದಾಶಿವರಾಯರ ತಂದೆಯು ಗುರುನಾಥ ಭಟ್ಟರು ಪುರಾಣ, ಪ್ರವಚನ ವೃತ್ತಿಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು. ಅವರ ಕಾಲ ಘಟ್ಟದಲ್ಲಿ ಪೇಶ್ವೆ ನಿಜಾಮರಿಂದ ಪಡೆದ ಉಂಬಳಿ, ಜಮೀನು ಬ್ರಿಟೀಷರ ಆಡಳಿತದ ಪರಿಣಾಮ ರದ್ದಾದ್ದರಿಂದ ಮತ್ತೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಆ ಸಮಸ್ಯೆಯಿಂದ ಮತ್ತಷ್ಟು ಬಡತನದ ಬೇಗೆಯಿಂದ ಹೊರಬರಲು ಗುರುನಾಥ ಭಟ್ಟರು ಸಂಪೂರ್ಣ ಶಾಸ್ತ್ರ ಹೇಳುವ ವೃತ್ತಿಯಲ್ಲಿ

ತೊಡಗಿಸಿಕೊಂಡರು. ಇದರಿಂದ ಅವರು ಗುರುನಾಥ ಶಾಸ್ತ್ರಿಗಳೆಂದು ಆ ಪ್ರದೇಶದಲ್ಲಿ ಚಿರಪರಿಚಿತರಾದರು.

ತಮ್ಮ ವೈದಿಕ ಪರಂಪರೆಯನ್ನು ಅವರ ಕುಟುಂಬ, ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲಿಲ್ಲವಾದರೂ, ವೇದ ಶಾಸ್ತ್ರಗಳ ಅಧ್ಯಯನಗಳ ಸಂಬಂಧವನ್ನು ನಡೆಸಿಕೊಂಡು ಬಂದರು. ಇವರು ಮಹಾರಾಷ್ಟ್ರದ ಮೂಲದವರಾಗಿದ್ದರು. ಒಂದು ಕಡೆ ತುಳುಜಾಪುರದ ತುಳುಜಾಭವಾನಿ ದೇವಿಯ ಆರಾಧಕರಾದರೆ, ಇನ್ನೊಂದು ಕಡೆ ಕರ್ನಾಟಕಕ್ಕೆ ವಲಸೆ ಬಂದ ನಂತರ ಕೊಪ್ಪಳಕ್ಕೆ ಸಮೀಪವಾದ ಹಂಪಿ ವಿರೂಪಾಕ್ಷ ದೇವಸ್ಥಾನವು ಅವರ ಕುಟುಂಬದ ಆರಾಧ್ಯ ದೈವವಾಗಿತ್ತು. ಸಂಗೀತ, ಸಾಹಿತ್ಯದ ಅನುಸಂಧಾನವೂ ಮನೆಯಲ್ಲಿತ್ತು. ಸ್ವತಃ ಗುರುನಾಥ ಶಾಸ್ತ್ರಿಗಳೇ ಪಂಪಾ ಮಹಾತ್ಮೆ, ಮಂಜುನಾಥ ಮಹಾತ್ಮೆ ಎಂಬ ಪುರಾಣ ಕಾವ್ಯಗಳನ್ನು ರಚಿಸಿದ್ದರು ಎಂದು ತಿಳಿದು ಬರುತ್ತದೆ.

**ಸದಾಶಿವರಾಯರ ಶಿಕ್ಷಣ:**

ಸದಾಶಿವರಾಯರ ಶಿಕ್ಷಣ ಪ್ರಾಥಮಿಕ ವಿದ್ಯಾಭ್ಯಾಸವು ಕೌಲೂರಿನಲ್ಲಿ ಅಜ್ಜಿ ಅಂಬಾಬಾಯಿಯ ಆಶ್ರಯದಲ್ಲಿ ಪೂರೈಸಿದರು. ಪುರಾಣ, ಪ್ರವಚನ ಎಂದು ಅಲ್ಲಿ, ಇಲ್ಲಿ ಊರಿಂದೂರಿಗೆ ಸಂಚರಿಸುತ್ತಿದ್ದರಿಂದ ಗುರುನಾಥ ಶಾಸ್ತ್ರಿಗಳು ಮಗನ ವಿದ್ಯಾಭ್ಯಾಸಕ್ಕೆ ತೊಂದರೆ ಯಾಗಬಾರದೆಂದು ತನ್ನ ತಾಯಿಯ ಹತ್ತಿರ ಬಿಟ್ಟರು. ಮೊಮ್ಮಗನನ್ನು ಮೈಗೂಡಿಸಿಕೊಂಡಿದ್ದರು. ಶಾಲೆಗೆ ಚಕ್ಕರ್ ಹೊಡೆದು ಬಂದು ಹಾಸು ಬೀಸಿಗಲ್ಲಿನ ಮೇಲೆ ಮಲಗಿ ಬಂದು ಸುಳ್ಳು ನೆಪಗಳನ್ನು ಹೇಳುತ್ತಿದ್ದರಿಂದ ಅವರ ಅಜ್ಜಿಯಿಂದ ಬೈಗುಳಗಳನ್ನು ತಪ್ಪಿಸಿಕೊಳ್ಳುತ್ತಿದ್ದರಂತೆ. ಇಂತಹ ಸುಳ್ಳುಗಳು ಅವರ ತಂದೆಗೆ ತಿಳಿದಾಗ ಅವರ ಕಡೆಯಿಂದ ಹೊಡೆತಗಳನ್ನು ತಿಂದಿದ್ದರು. ಅವರು ಶಾಲೆಗೆ ಹೋಗುವುದು, ಸುಳ್ಳು ಹೇಳುವುದು ಚಿಕ್ಕಂದಿನಿಂದಲೇ ಇದ್ದುದ್ದರಿಂದ ಅಭಿನಯಿಸುವ ಸೂಕ್ಷ್ಮತೆ ಕಂಡು ಬರುತ್ತದೆ. ಸದಾಶಿವರಾಯರ ಪ್ರಾಥಮಿಕ ಶಿಕ್ಷಣವನ್ನು ಮರಾಠಿ ಭಾಷೆಯಲ್ಲಿ ಮುಗಿಸಿದರು. ಬೆಳಗಾವಿ ಜಿಲ್ಲೆಯ ಗುರ್ಲ ಹೊಸೂರಿನ ವಿನಾಯಕ ಕೃಷ್ಣ ಘಾಟಿ ಎಂಬುವವರು ಸದಾಶಿವರಾಯರಿಗೆ ಕನ್ನಡ ಅಕ್ಷರಾಭ್ಯಾಸದ ಗುರುಗಳಾದರು. ಅವರ ವಿದ್ಯಾಭ್ಯಾಸ ಪಡೆದುಕೊಂಡರು. ಚುರಮುರಿ ಶೇಷಗಿರಿರಾಯರು ಬೆಳಗಾವಿ ಗುರ್ಲ ಹೊಸೂರಿನವರಾಗಿದ್ದುದರಿಂದ ಇವರ ಪ್ರಭಾವ ಮತ್ತು ಮಾರ್ಗದರ್ಶನವು ಸದಾಶಿವರಾಯರು ಪಡೆದುಕೊಂಡರು ಎಂದರೆ ತಪ್ಪಾಗಲಾರದು. ಹಾಗೇ ಮರಾಠಿ ವೃತ್ತಿ ರಂಗ ಭೂಮಿಯ ಹರಿಕಾರರಾದ ಅಣ್ಣಾಜಿರಾವ್ ಕಿರ್ಲೋಸ್ಕರ್ ಇವರು ಕೂಡಾ ಗುರ್ಲ ಹೊಸೂರಿನವರಾಗಿದ್ದರು. ಮತ್ತು ಸದಾಶಿವರಾಯರ ತಂದೆಯವರು, ಗುರುನಾಥ ಶಾಸ್ತ್ರಿಯವರು ಹಳ್ಳಿ ಹಳ್ಳಿಗೆ ಸಂಚರಿಸಿ ದೊಡ್ಡಾಟವನ್ನು ಕಲಿಸುತ್ತಿದ್ದರಿಂದ ಸದಾಶಿವರಾಯರಿಗೆ ಮನೆಯ ವಾತಾವರಣ ಮತ್ತು ಅವರ ಸುತ್ತ ಮುತ್ತಲಿನ ಪರಿಸರವು ರಂಗಭೂಮಿ ಚಟುವಟಿಕೆಯಲ್ಲಿರುವ ಹಲವಾರು ಜನಗಳ ಒಡನಾಟದಿಂದ ಇವರಿಗೆ ರಂಗಭೂಮಿಯಲ್ಲಿ ನಾಡಾಚಾರ್ಯನಾಗಿರಲು ಸಾಧ್ಯವಾಯಿತು.

ಮರಾಠಿ, ಉರ್ದು, ಕನ್ನಡ, ಸಂಸ್ಕೃತ ಭಾಷೆಗಳ ಪರಿಚಯ ಚಿಕ್ಕ ವಯಸ್ಸಿನಲ್ಲಿ ಆದುದ್ದರಿಂದ ಎಲ್ಲರ ಸಂಪರ್ಕದಿಂದ ಭಾಷೆ ಬಲ್ಲವರಾಗಿದ್ದರು. ವಿಭಿನ್ನವಾದ ಮನೆತನಗಳ ಸಂಚಾರದಿಂದ ವೈದಿಕ ಸಂಸ್ಕೃತಿ ಪರಂಪರೆಯಿಂದ ಸಂಸ್ಕೃತ ಭಾಷೆಯನ್ನು ಕಲಿತಿದ್ದರು. ಹಾಗೆ ಅವರ ಮನೆಯಲ್ಲಿ ದಿನವೂ ಸಾಯಂಕಾಲ ಭಜನೆ, ದೇವತಾಸ್ಮರಣೆ ಕಾರ್ಯಕ್ರಮಗಳು ನಡೆಯುತ್ತಿದ್ದವು. ಸದಾಶಿವರಾಯರು ಅವುಗಳಲ್ಲಿ ಭಾಗಿಯಾಗಿ ಅಲ್ಲಿಯ ಕಥೆ, ಪ್ರವಚನ,

ಪುರಾಣಗಳನ್ನು ಆಲಿಸುವುದು ಜನರ ಮುಂದೆ ಲಘು ಹಾಸ್ಯದ ಅಭಿನಯದ ಮುಖಾಂತರ ಜನರನ್ನು ರಂಜಿಸುತ್ತಿದ್ದರು. ಆದ್ದರಿಂದಲೇ ಸದಾಶಿವರಾಯರು ಚಿಕ್ಕಂದಿನಿಂದಲೇ ಅಭಿನಯದ ಕಲೆಯನ್ನು ಹೊಂದಿದ್ದರು.

ಮುಂದೆ ಸದಾಶಿವರಾಯರು ಉನ್ನತ ಶಿಕ್ಷಣಕ್ಕಾಗಿ ತಮ್ಮ ಸೋದರಮಾವನಾದ ಭೀಮಸೇನರಾಯರ ಜೊತೆಗೆ ರಾಯಚೂರಿಗೆ ಬಂದರು. ಇವರು ಎಂಟು ವರ್ಷದವರಿದ್ದಾಗಲೇ ತಂದೆ ಮತ್ತು ಅಜ್ಜಿಯನ್ನು ಬಿಟ್ಟು ಸೋದರಮಾವನ ಜೊತೆಗೆ ಬಂದರು. ಇಲ್ಲಿ ಉರ್ದು, ಪಾರ್ಸಿ ಮತ್ತು ಇಂಗ್ಲೀಷ್ ವಿದ್ಯಾಭ್ಯಾಸವನ್ನು ನಡೆಸಿದರು. ಗರುಡರಿಗೆ ಅವರ ಮಾವನ ಅಡ್ಡಚಟಗಳು, ಪರಿಚಯ, ಬೇರೆ–ಬೇರೆ ಜನಗಳ ಹೊಸ ಅನುಭವಗಳು ಹಾಗೂ ಹೊರ ಜಗತ್ತಿನ ನಡೆ–ನುಡಿಗಳು ಹಂತಹಂತವಾಗಿ ಅವರಿಗೆ ಗಾಢವಾದ ಪ್ರಭಾವ ಬೀರತೊಡಗಿದವು. "ರಾಯಚೂರಿನಲ್ಲಿ ಕಲಿಯುವ ಸಂದರ್ಭದಲ್ಲಿ ಮರಾಠಿ ಶಿಕ್ಷಕರಾದ ಫೆಂಡಸೆ ಹಾಗೂ ಶೇಷಗಿರಿರಾಯರು ಸಾಹಿತ್ಯಾಸಕ್ತಿ ಕೆರಳಿಸಿ, ಮಾರ್ಗದರ್ಶನವನ್ನು ನೀಡಿದರು. ಮುಂದೆ ಸ್ವಾತಂತ್ರ್ಯ ಚಳುವಳಿಯ ದಿನದಿಂದ ದಿನಕ್ಕೆ ಬಿರುಸಾಗಿ ಹೊರಟಿತು. ತಿಲಕ ಅವರ "ಕೇಸರಿ" ಪತ್ರಿಕೆ ಪ್ರಚಾರ ಪಡೆಯ ಹತ್ತಿತ್ತು".[4] ಗರುಡರಿಗೆ ಈ ಪತ್ರಿಕೆಯನ್ನು ಓದುವ ಹವ್ಯಾಸ ಬೆಳೆಯಿತು. ಸಾಹಿತ್ಯ, ಸಾಮಾಜಿಕ ಜೀವನಕ್ಕೆ ಹೆಚ್ಚು ವಿಸ್ತಾರವೂ, ಗಟ್ಟಿತನವೂ ಬಂದದ್ದು ಅವರ ಕಲಬುರ್ಗಿಯಲ್ಲಿ ವಾಸವಾಗಿ ಭಾಷಾ ಪ್ರೌಢಿಮೆ ಸಂಘಟನಾ ಆಸಕ್ತಿ ಅಂಶಗಳನ್ನು ಅಳವಡಿಸಿಕೊಂಡಿದ್ದರು. ಬೆಳೆಯುತ್ತಾ ತಿಲಕರ ವಿಚಾರಧಾರೆಯಿಂದ ಪ್ರಭಾವಿತರಾದ ಇವರು, ಸಹಜವಾಗಿ ಹಿಂದೂ ಧರ್ಮದ ಬಗ್ಗೆ ಆಳ ಅಧ್ಯಯನ ಮಾಡತೊಡಗಿದರು. ಹಾಗೂ ರಾಷ್ಟ್ರಾಭಿಮಾನವನ್ನು ಬೆಳೆಸಿಕೊಂಡರು. 'ಸಮವಯಸ್ಕರು ಸ್ಥಾಪಿಸಿದ ಪಾಂಡುರಂಗ ಕೃಷ್ಣ ಆಣಿ ಮಂಡಳಿ ಎಂಬ ಸಂಘದ ಸದಸ್ಯರಾದರು. ಕ್ರಿ. ಶ. 1897ರಲ್ಲಿ ಗರುಡರು ಸಾಮಾಜಿಕ ಒಡನಾಟದ ಜೀವನ ಪ್ರಾರಂಭಿಸಿದರು.

ಗರುಡರಿಗೆ ರಾಷ್ಟ್ರಭಕ್ತಿಯನ್ನು ಪ್ರೇರೇಪಿಸುವ ಅನೇಕ ನಾಟಕಗಳು ನಡೆಯುತ್ತಿದ್ದವು. ಗಣೇಶೋತ್ಸವ ಸಂದರ್ಭದಲ್ಲಿ ಪಾಂಡುರಂಗ ಕೃಷ್ಣ ಆಣಿ ಮಂಡಳಿಯಿಂದ ಬಂದ ವಿಮೋಚನಾ ನಾಟಕವನ್ನು ಮಾಡಲು ಮುಂದಾದರು. ಇದರಿಂದ ಕ್ರಿ. ಶ. 1897ರಲ್ಲಿ ತಿಲಕರು ಕಾರಾಗೃಹವಾಸದ ವಿಷಯವನ್ನೊಳಗೊಂಡಿತ್ತು.

ಗರುಡರು ತಾವು ಆರಂಭಿಸಿದ ವೃತ್ತಿರಂಗಭೂಮಿ ಚಟುವಟಿಕೆಯನ್ನು ಶಿವಸುತ ಪ್ರಸಾದಿಕ ಮಂಡಳಿಯಿಂದ ನಡೆಸಿದ್ದು, ಹೆಚ್ಚಾಗಿ ಹೈದರಾಬಾದ್ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ ಪ್ರದೇಶಗಳಲ್ಲಿ ಅವರು ಆ ಕಂಪನಿ ಕಟ್ಟಿದಾಗ ಭಾರತದ ಆಧುನಿಕ ರಂಗಭೂಮಿಯ ಮೊದಲ ಘಟ್ಟವಾದ ವೃತ್ತಿ ರಂಗಭೂಮಿಯಲ್ಲಿ ಗರುಡ ಸದಾಶಿವರಾಯರು ಕ್ರಮೇಣವಾಗಿ ನಾಟಕಗಳನ್ನು ಬರೆದು, ಸ್ವತಃ ತಾವೇ ಪ್ರಮುಖ ಪಾತ್ರಗಳನ್ನು ನಿಭಾಯಿಸಲು ಆರಂಭಿಸಿದರು. ಸರಳ ವಸ್ತು ವಿನ್ಯಾಸ, ಆಡಂಬರ ವಿಲ್ಲದ ರಂಗ ಮಂದಿರವನ್ನು ನಿರ್ಮಿಸಿಕೊಂಡು, ನುರಿತವಾದ ಪಾತ್ರಧಾರಿಗಳನ್ನು ನೇಮಿಸಿಕೊಂಡು, ಸುಸಜ್ಜಿತ ರಂಗ ತಂತ್ರಗಳನ್ನು ಬಳಸಿಕೊಂಡು, ಒಗ್ಗಟ್ಟಿನಿಂದ ಕೂಡಿದ ತಂಡವೊಂದನ್ನು ನಿರ್ಮಿಸಿಕೊಂಡು, ರಂಗಭೂಮಿಯನ್ನು ಪ್ರವೇಶಿಸಿದರು.

ಇಂತಹ ನಾಟಕ ಕಲೆಯ ಇತಿಹಾಸವೆನ್ನುವುದು ಗರುಡ ಸದಾಶಿವರಾಯರು ಪಾತ್ರರಾಗುತ್ತಾರೆ. ನಾಟಕ ಕಲೆಯೇ ಇತಿಹಾಸ ಎನ್ನುವುದು ಬಹು ಪುರಾತನವಾದದ್ದು. ಅದು

ಚಲಿಸಿದಂತೆ ಪಥ ಸುದೀರ್ಘವಾಗಿ ಪ್ರಪಂಚದ ಅತೀ ಪ್ರಾಚೀನ ಗ್ರೀಕ್ ಸಂಸ್ಕೃತ ಇತ್ಯಾದಿ ಭಾಷೆಗಳಲ್ಲಿ ಇದಕ್ಕೆ ಪ್ರಥಮವಾಗಿ ಪ್ರಾಶಸ್ತ್ಯ ದೊರಕಿತು. "ಗ್ರೀಕ್ ಸಾಹಿತ್ಯದಲ್ಲಿ ಇದರ ಉಗಮ ಕ್ರಿ. ಪೂ. 05ನೇ ಶತಮಾನದ ಇಸ್ಕಿಲಸ್‌ನ ಸಪ್ಲೈಡ್ಸ್ ಇದು ಜಗತ್ತಿನಲ್ಲಿಯೇ ಪ್ರ ಪ್ರಥಮ ನಾಟಕದ ಅಲ್ಲಾಯಿನಿಕ್ ನಿಕಾಲ್ ಎಂಬುವರು ಅಭಿಪ್ರಾಯ ಪಡುತ್ತಾರೆ".[5] ಇಂತಹ ನಾಟಕಗಳು ರಂಗಭೂಮಿಗೆ ಮಹತ್ವವಾದ ಪುಷ್ಟಿಯನ್ನು ನೀಡುತ್ತವೆ. ಅದೇ ರೀತಿಯಾಗಿ ಕನ್ನಡ ರಂಗಭೂಮಿಗೆ ಶಾಂತಕವಿ, ಶ್ರೀರಂಗರು, ಶ್ರೀಕಂಠ ಶಾಸ್ತ್ರಿ ಮತ್ತು ಗರುಡ ಸದಾಶಿವರಾಯರು ತಮ್ಮ ಸಾಹಿತ್ಯವನ್ನು ಮೊಳಗಿಸಿ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದಾರೆ.

**ಕೊನೆ ಟಿಪ್ಪಣಿಗಳು:**

1. ಪ್ರಕಾಶ ಗರುಡ, (2008), ಗರುಡ ಸದಾಶಿವರಾಯರು, ನವದೆಹಲಿ: ಸಾಹಿತ್ಯ ಅಕಾಡೆಮಿ, ಪು.ಸಂ. 12
2. ಅದೇ
3. ಬಸವರಾಜ ಜಗಜಂಪಿ, (1993), ಗರುಡ ಸದಾಶಿವರಾಯರು (ನಾಟಕ ಸಾಹಿತ್ಯ ಹಾಗೂ ವೃತ್ತಿ ರಂಗಭೂಮಿ ಅಧ್ಯಯನ), ಗದಗ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಪು.ಸಂ. 22–23
4. ಪ್ರಕಾಶ ಗರುಡ, (2008), ಗರುಡ ಸದಾಶಿವರಾಯರು, ನವದೆಹಲಿ: ಸಾಹಿತ್ಯ ಅಕಾಡೆಮಿ, ಪು.ಸಂ. 15
5. ವೀರಣ್ಣ ರಾಜೂರು, (2020), ಕನ್ನಡ ನಾಟಕ ಪಥ, ಬೆಂಗಳೂರು: ಸಾರಾ ಎಂಟರ್ ಪ್ರೈಸಸ್, ಪು.ಸಂ. 2

**ಪರಾಮರ್ಶನ ಗ್ರಂಥಗಳು:**


1. ಪ್ರಕಾಶ ಗರುಡ, (2008), ಗರುಡ ಸದಾಶಿವರಾಯರು, ನವದೆಹಲಿ: ಸಾಹಿತ್ಯ ಅಕಾಡೆಮಿ.
2. ವೀರಣ್ಣ ರಾಜೂರು, (2020), ಕನ್ನಡ ನಾಟಕ ಪಥ, ಬೆಂಗಳೂರು: ಸಾರಾ ಎಂಟರ್ ಪ್ರೈಸಸ್.
3. ಬಸವರಾಜ ಜಗಜಂಪಿ, (1993), ಗರುಡ ಸದಾಶಿವರಾಯರು (ನಾಟಕ ಸಾಹಿತ್ಯ ಹಾಗೂ ವೃತ್ತಿ ರಂಗಭೂಮಿ ಅಧ್ಯಯನ), ಗದಗ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ.
4. ಸಂ. ರಮಾಕಾಂತ ಜೋಶಿ ಮತ್ತು ಡಾ. ಪ್ರಕಾಶ ಗರುಡ, (2011), ಗರುಡ ಸದಾಶಿವರಾಯರು – ಸಂಪುಟ 1 ಮತ್ತು 2, ಧಾರವಾಡ: ಮನೋಹರ ಗ್ರಂಥಮಾಲಾ.
5. ರಂಗನಾಥ ಎಚ್. ಕೆ., (1974), ಬಣ್ಣ ಬೆಳಕು, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
6. ಆಚಾರ್ಯ ಕೆ. ವಿ., (1979), ಕರ್ನಾಟಕ ರಂಗಭೂಮಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
7. ಮರುಳ ಸಿದ್ದಪ್ಪ ಕೆ., (1986), ಕನ್ನಡ ನಾಟಕ ಸಮೀಕ್ಷೆ, ಬೆಂಗಳೂರು: ಪ್ರತೀಮಾ ನಾಟಕ ಪ್ರಕಾಶನ.